

ಕೃಷ್ಣಮೂರ್ತಿ ಹನೂರು

# ಮನುಷ್ಯ ಜಾತಿ ತಾನೊಂದೆ ವಲಂ

## ಪಂಪನ ಘೋಷವಾಕ್ಯದ ಹಿಂದೆಮುಂದೆ

ಇತ್ತೀಚಿನ ವರ್ಷಗಳಲ್ಲಿ ಮಹಾಕವಿ ಪಂಪನ 'ಆದಿಪುರಾಣ'ದ ಹದಿನೈದನೇ ಆಶ್ವಾಸದ ಹದಿನಾಲ್ಕನೆಯ ಪದ್ಯದ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ವಾಕ್ಯ ಕನ್ನಡ ಓದಿದವರಲ್ಲಿ ಹೆಚ್ಚು ಬಳಕೆಯಾಗುತ್ತ, ಆದಿಕವಿಯಾಗಿ ಆಗಲೇ ಜಾತಿ, ಮತ, ಧರ್ಮವನ್ನು ಮೀರುತ್ತ ವಿಶ್ವಮಾನವ ಪ್ರಜ್ಞೆಯನ್ನು ಅದೆಷ್ಟು ಘನವಾಗಿ ಸಾರಿರುವನೆಂದು ಹೇಳುವುದುಂಟು. ನಿಜ, ಈ ನಾಲ್ಕು ಪದಗಳನ್ನು ಪ್ರತ್ಯೇಕವಾಗಿ ಓದಿದಾಗ 'ಆಗು,ಆಗು ನೀ ಜಾತಿರಹಿತ' ಎಂಬ ಉದಾತ್ತ ಧ್ಯೇಯವಾಕ್ಯದಂತೆ ಕಾಣುತ್ತದೆ. ಆದರೆ ಈ ಪದಗಳನ್ನು 'ಆದಿಪುರಾಣ'ದ ಕಥನ ಸಂದರ್ಭದಲ್ಲಿ ಇಟ್ಟು ನೋಡಿದಾಗ ಏನು ಅರ್ಥ ಬರುತ್ತದೆ ಎಂಬುದೂ ಎಲ್ಲರ ಗಮನಕ್ಕೆ ಬರಬೇಕಾಗಿದೆ. ಇದಿಷ್ಟು ಮಾತಿನ ಮೊದಲಾಗಿ ಈಗ ನಮ್ಮ ಸುತ್ತಿನ ವಿಚಾರವಾದಿಗಳು, ಬುದ್ಧಿಜೀವಿಗಳು, ಕನ್ನಡ ಅಧ್ಯಾಪಕರು ಪಂಪನನ್ನು ಮೆಚ್ಚಿ ಬಳಸುತ್ತಿರುವ ಈ ವಾಕ್ಯವನ್ನು ಹಳೆಯ ತಲೆಮಾರಿನ ವಿದ್ವಾಂಸರು ಎಲ್ಲೂ ಪ್ರಸ್ತಾಪಿಸಿ ಮಾತಾಡಿದಂತೆ ತೋರುವುದಿಲ್ಲ. ತೀರಾ ಹಿಂದಕ್ಕೆ ಹೋಗುವುದು ಬೇಡ 1980ರಲ್ಲಿ ಪಂಪನ 'ಆದಿಪುರಾಣ'ಕ್ಕೆ ಗದ್ಯಾನುವಾದ ಬರೆದು, ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಪ್ರಕಟವಾಗಿರುವ ಕೃತಿಯಲ್ಲಿ ಅದರ ಮಹತ್ವವನ್ನು ಕುರಿತು ನಲವತ್ತು ಪುಟಗಳ ಮುನ್ನುಡಿಯನ್ನು ಲಕ್ಷ್ಮೀನರಸಿಂಹ ಶಾಸ್ತ್ರಿಗಳು ಬರೆದಿರುತ್ತಾರೆ. ಅಲ್ಲಿ ಕಾವ್ಯದ ಅನೇಕ ಸ್ವಾರಸ್ಯಕರ ಪದ್ಯಗಳನ್ನು ಅರ್ಥ, ಸಂದರ್ಭ ಸಹಿತ ವಿವರಿಸುತ್ತ ಪಂಪನ ಪ್ರತಿಭೆ, ವಿದ್ವತ್ತು, ಕಾವ್ಯರಚನಾ ಶಕ್ತಿ ಇದನ್ನೆಲ್ಲ ಹೇಳುವರಾದರೂ ಕವಿ ಹೇಳುವ ಜಾತಿ ಒಂದೆನ್ನುವ ಪದ್ಯ ವಾಕ್ಯದ ಪ್ರಸ್ತಾಪ ಮಾತ್ರ ಇಲ್ಲ! ಅಂದರೆ ಶಾಸ್ತ್ರಿಗಳಿಗೆ ಈಗ ನಾವೆಲ್ಲ ಕೊಂಡಾಡಿ ಉದ್ಧರಿಸುತ್ತಿರುವ ವಾಕ್ಯ ಗಮನಕ್ಕೆ ಬರಲಿಲ್ಲವೇ?

ಇದಾಗಿ ಶಾಸ್ತ್ರಿಗಳಿಗಿಂತ ಪೂರ್ವ 1954ರಲ್ಲಿ ಎಲ್. ಗುಂಡಪ್ಪನವರು, ಪಂಪನನ್ನು ಓದಬೇಕೆಂಬ